**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**<u>ದಿನಾಂಕಃ-15.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿಪರ</u>**
**<u>ಶ್ರೀ ಕೆ.ಎಸ್.ಆರ್ ರವರಿಂದಃ</u>**

ನನ್ನ ಹೆಸರು ಸಿ.ಟಿ ಮೋಹನ್ ರಾವ್ ಆಗಿರುತ್ತದೆ. ವಾದಿ ನಾಗರಾಜ್ ರವರು ನನ್ನ ದೊಡ್ಡಣ್ಣ ಎಂದರೆ ಸರಿ. ವಾದಿ ಮತುತ ನನ್ನ ತಂದೆ ತುಕಾರಾಂ ರಾವ್ ರವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದರೆ ಸರಿ. ಮೊದಲನೇ ವಾದಿ ನಾಗರಾಜ್ ರಾವ್ , 2 ನೇ ಕಾಂತರಾಜ್ ಅಂದರೆ 1 ನೇ ಪ್ರತಿವಾದಿ, 3 ನೇ ಮೋಹನ್ ರಾವ್ ಎಂದರೆ 2 ನೇ ಪ್ರತಿವಾದಿ , 4 ನೇ ರಾಮ್ ಚಂದ್ರ ರಾವ್ ಎಂದರೆ 3 ನೇ ಪ್ರತಿವಾದಿ, 5 ನೇ ಕುಸುಮ ಅಂದರೆ 4 ನೇ ಪ್ರತಿವಾದಿ ಎಂದರೆ ಸರಿ. ಈ ಮೇಲಿನವರೆಲ್ಲಾ ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವೆಲ್ಲಾ ಈಗ ಬೇರೆ ಇರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ತುಕಾರಾಮ್ ರಾವ್ ರವರು ಬದುಕಿದ್ದಾಗ ಕುಟುಂಬದ ಎಲ್ಲಾ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾವು ಚಿಕ್ಕವರಿದ್ದಾಗ ನಮ್ಮ ಕುಟುಂಬದ ವ್ಯವಹಾರವನ್ನು ನನ್ನ ತಂದೆಯೇ ನೋಡಿಕೂಳ್ಳುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ದೊಡ್ಡವರಾದ ನಂತರ ನಾವು ಬೇರ ಬೇರೆ ವಾಸವಾಗಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಯು Tailor ವೃತ್ತಿ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈಗ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯೂ ನಾವೆಲ್ಲ ಚಿಕ್ಕವರಿದ್ದಾಗ Sri. Ranganatha Readymade Co-operative society ಎಂಬ society ಯಲ್ಲಿ ಕಾರ್ಯರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆಸರಿಯಲ್ಲ. ನನ್ನ ತಂದೆಗೆ ಬರುತ್ತಿದ್ದ ಸಂಬಳ ಮತ್ತು ವಾದಿಯು ಟೈಲರ್ ವೃತಿ ಯಿಂದ ಬರುತ್ತಿದ್ದ ಆದಾಯಗಳಿಂದ ದಾವಾ ಆಸ್ತಿಗಳಲ್ಲಿ ವಾಸದ ಮನೆಗಳನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣದ

ನಂತರ 1 ನೇ ಪ್ರತಿವಾದಿಯು ಕುಟುಂಬದ ಜವಾಬ್ದಾರಿಯನ್ನು ತೆಗೆದುಕೊಂಡು ಕುಟುಂಬವನ್ನು ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. 1-3 ನೇ ಪ್ರತಿವಾದಿಗಳು ಒಂದುಪರ , ವಾದಿಯೇ ಮತ್ತೊಂದು ಪರ ಎಂದರೆ ಸರಿಯಲ್ಲ. 1-3 ನೇ ಪ್ರತಿವಾದಿಗಳು ಪರಸ್ಪರ ಒಂದಾಗಿ ವಾದಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆಯನ್ನು ನೀಡದೇ ಮನೆಯಿಂದ ಹೊರಗೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ನಮ್ಮಗಳ ಬಳಿ ಅವರ ಪಾಲಿನ ಹಿಸ್ಸೆಯನ್ನು ಕೇಳಿದ್ದು ನಿನಗೆ ಯಾವುದೇ ಹಿಸ್ಸೆಯನ್ನು ನೀಡುವುದಿಲ್ಲ ಎಂದು ನಾವು ವಾದಿಯನ್ನು ಮನೆಯಿಂದ ಹೊರಗೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಗಳಾದ ದಾವಾ ಆಸ್ತಿಗಳಲ್ಲಿ 1-3 ನೇ ಪ್ರತಿವಾದಿಯರು ಮನೆಗಳನ್ನು ನಿರ್ಮಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಮನೆಗಳನ್ನು ನಿರ್ಮಿಸಿಕೊಂಡಿರುತ್ತೇನೆ ಆದರೆ ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ದಾವಾ ಆಸಿತಗಳಲ್ಲಿ ಹಿಸ್ಸೆಯನ್ನು ನೀಡುವಂತೆ ನಮ್ಮಗಳನುಪ್ನ ಕೇಳಿದ್ದು ನಾವು ಅದನ್ನು ನಿರಾಕರಿಸಿ ಆತನನ್ನು ಮನೆಯಿಂದ ಹೊರಗೆ ಹಾಕಿರುವುದರಿಂದ ವಾದಿಯು ಈ ದಾವೆಯನ್ನು ನಮ್ಮಗಳ ವಿರುದ್ದ ಹೂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ನನ್ನ ಪರ ಪ್ರತಿವಾದ ಪತ್ರ ವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರತಿವಾದ ಪತ್ರವನ್ನು ನಾನೇ ಹೇಳಿ ಬರೆಸಿ ಹಾಕಿಸಿರುತ್ತೇನೆ. ನಾನು ಹೇಳಿ ಬರೆಸಿರುವ ಪ್ರತಿವಾದ ಪತ್ರವನ್ನು 1 ಮತ್ತು 3 ನೇ ಪ್ರತಿವಾದಿಗಳು ಒಪ್ಪಿರುತ್ತಾರೆ. Ranganatha Readymade Co-operative society ಎಂಬ society ಯಲ್ಲಿ ನನ್ನ ತಂದೆ ಕಾರ್ಯರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಸದರಿ ಸೊಸೈಟಿಯಿಂದ ಬಟ್ಟೆಗಳನ್ನು ಹೊಲೆದು ಮಾರಾಟಕ್ಕೆ ಕಳುಹಿಸುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ ಸದರಿ ಸೊಸ್ಯಟಿಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಕೈ ತುಂಬ ಸಂಬಳ ಬರುತ್ತಿತ್ತು ಎಂದರೆ ಸರಿ. ವಾದಿಯು ಟೈಲರ್ ವೃತ್ತಿಯನ್ನು ಮಾಡಿಕೊಂಡು ಬಟ್ಟೆಗಳನ್ನು ಹೊಲೆದು ಅದರಿಂದ ಬಂದ ಆದಾಯದಿಂದ ಹಿರಿಯ ಮಗನಾದ್ದರಿಂದ ನಮ್ಮಗಳನ್ನು ವಾದಿಯು ನೊಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ತನಗೆ ಬರುತ್ತಿದ್ದ ಆದಾಯದಿಂದ ಮನೆಯನ್ನು ನಿರ್ವಹಿಸಿಕೂಂಡು ಅದರಿಂದ ಉಳಿಸಿದ ಆದಾಯದಿಂದ ಮತ್ತು ತಂದೆಯ ಸಂಬಳದಿಂದ ದಾವಾ ಐಟಂ.ನಂ.4 ನ್ನು ಖರೀದಿಸಿರುತ್ತಾರೆಂದರೆ ಸರಿಯಲ್ಲ. ದಾವಾ ಐಟಂ ನಂ. 4 ಹಳೇ ಕಾನೇಶ್ಮಾರಿ ನಂ.56 ಆಗಿತ್ತು ಎಂದರೆ ಸರಿ ಸದರಿ ದಾವಾ ಐಟಂ ನಂ. 4 ರ ವಿಸ್ತೀರ್ಣ ಪೂರ್ವ-ಪಶ್ಚಿಮ 23

ಗಜ, ಉತ್ತರ-ದಕ್ಷಿಣ 5 ವರೆ ಗಜ ಇತ್ತು ಎಂದರೆ ಸರಿ. ಸದರಿ ದಾವಾ ಐಟಂ ನಂ.4 ಅನ್ನು ನನ್ನ ತಂದೆಯವರು ದಿಃ 10-12-1971 ರ ಲ್ಲಿ ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆಂದರೆ ಸರಿ. ಸದರಿ ಸಮಯದಲ್ಲಿ ನನ್ನ ಅಣ್ಣನಾದ ವಾದಿಯು ವಯಸ್ಕರಾಗಿದ್ದರು ಎಂದರೆ ಸರಿಯಲ್ಲ, ನಾನು ಮತ್ತು 1 ಮತ್ತು 3 ರವರು ಅಪ್ರಾಪ್ತ ವಯಸ್ಕರಾಗಿದ್ದು, 4 ನೇ ಪ್ರತಿವಾದಿಯ ಜನಿಸಿರಲಿಲ್ಲ ಎಂದರೆ ಸಾಕ್ಷಿಯ ನಾನು ಮತ್ತು 1 ನೇ ಪ್ರತಿವಾದಿಯ ಅಪ್ರಾಪ್ತ ವಯಸ್ಕರಾಗಿದ್ದು 3 ಮತ್ತು 4 ನೇ ಪ್ರತಿವಾದಿಯು ಆ ಸಮಯದಲ್ಲಿ ಇನ್ನೂ ಜನಿಸಿರಲಿಲ್ಲ ಎಂದು ನುಡಿಯತ್ತಾರೆ. ವಾದಿಯು ಆ ಸಮಯದಲ್ಲಿ ವಯುಸ್ಕರಾಗಿದ್ದರಿಂದ ವಾದಿಯೊಬ್ಬರೇ ನಮ್ಮ ಕುಟುಂಬದಲ್ಲಿ ದುಡಿಯುತ್ತಿದ್ದರು ಎಂದರೆ ಸರಿಯಲ್ಲ. 1971 ರಲ್ಲಿ ನನಗೆ ಸುಮಾರು 3 ವರ್ಷವಾಗಿತ್ತು. ನನ್ನ ತಂದೆ ಮತ್ತು ನನ್ನ ಅಣ್ಣನಾದ ವಾದಿಯೂ ಒಟ್ಟು ಕುಟುಂಬದ ಆದಾಯದಿಂದ ದಾವಾ ಐಟಂ ನಂ.4 ಅನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ, ನನ್ನ ತಂದೆಯವರು ಒಟ್ಟು ಕುಟುಂಬದ ಆದಾಯದಿಂದ ದಾವಾ ಐಟಂ.ನಂ.4 ಅನ್ನು ಖರೀದಿಸಿ ಅವರ ಹೆಸರಿಗೆ ನೋಂದಾಯಿಸಿಕೂಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ದಾವಾ ಐಟಂ ನಂ.4 ಅನ್ನು ಸ್ವಂತವಾಗಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿ ಮತುತ ಪ್ರತಿವಾದಿಯರೆಲ್ಲರಿಗೂ ಸಮಾನ ಹಕ್ಕುದಾರರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳಾದ 4 ಜನರಿಗೆ ಮಾತ್ರ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ವಾದಿಗೂ ದಾವಾ ಆಸ್ತಿಗಳಲ್ಲಿ ಹಕ್ಕು ಇರುವುದರಿಂದ ವಾದಿಗೆ ದಾವಾ ಆಸ್ತಿಗಳಲ್ಲಿ ನಮ್ಮಗಳಂತೆ ಸಮಾನದ ಹಿಸ್ಸೆಯ ಹಕ್ಕು ಇರುತ್ತದೆ ಎಂದೆರ ಸರಿಯಲ್ಲ. ನನ್ನ ತಂದೆ ತೀರಿ ಹೋದ ನಂತರ 1-3 ನೇ ಪ್ರತಿವಾದಿಗಳಾದ ನಾವುಗಳು ದ್ವೇಷದಿಂದ ವಾದಿಯನ್ನು ಇದುವರೆಗೂ ಮಾತನಾಡಿಸುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈ ದಾವೆ ಹಾಕಿದ ನಂತರದಿಂದ ಮಾತನಾಡಿಸುತ್ತಿಲ್ಲ ಎಂದು ನುಡಿಯುತ್ತಾರೆ. 1-3 ನೇ ಪ್ರತಿವಾದಿಗಳಾದ ನಮ್ಮಗಳ ಕಿರುಕುಳವನ್ನು ತಾಳಲಾರದೇ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ. ನಂ.4 ಒಟ್ಟು ಕುಟುಂಬದ ಆಸ್ತಿಆಗಿರುವುದರಿಂದ ನನ್ನ ತಂದೆ ಒಬ್ಬಂಟಿಯಾಗಿ ಪರಭಾರೆ ಮಾಡುವ ಹಕ್ಕು ಇರಲಿಲ್ಲ ಎಂದರ ಸರಿಯಲ್ಲ. ನನ್ನ ತಂದೆ ಜೀವಂತವಾಗಿದ್ದಾಗ ದಾವಾ ಐಟಂ.ನಂ.4 ಅನ್ನು ಮಾರಾಟ ಮಾಡಿರಲಿಲ್ಲ ಎಂದರೆ ಸಾಕ್ಷಿಯು ವಿಲ್ ಮೂಲಕ ಹಸ್ತಾಂತರ ಮಾಡಿದ್ದು, ಸದರಿ ಆಸ್ತಿಯನ್ನು ಪಿತ್ರಾರ್ಜಿತ

ವಾಗಿ ವಾದಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ವಾದಿಗೆ ಯಾವುದೇ ಆಸ್ತಿಯನ್ನು ವಿಲ್ ಮೂಲಕ ಹಸ್ತಾಂತರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ದಾವಾ ಐಟಂ. ನಂ.4 ನ್ನು 1 ಮತ್ತು 2 ನೇ ಪ್ರತಿವಾದಿಯರಿಗೆ ಉಯಿಲನ್ನು ಬರೆದು ಕೊಟ್ಟಿರುತ್ತಾರೆ ಎಂದು ಹೇಳುವ ಸಮಯದಲ್ಲಿ ನನ್ನ ತಂದಗೆ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲ ಮತ್ತು ಜ್ಞಾನ ಶುದ್ಧವಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಸೇರಿ ದಾವಾ ಐಟಂ.ನಂ.4 ಕ್ಕೆ ಸಬಂಧಿಸಿದಂತೆ ಸುಳ್ಳು ಉಯಿಲು ಪತ್ರವನ್ನು ಸೃಷ್ಟಿಕೊಂನಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸುಳ್ಳು ಉಯಿಲಿನ ಆಧಾರದ ಮೇಲೆ ಚೇಳೂರು ಗ್ರಾಮ ಪಂಚಾಯತಿಯಲ್ಲಿ ನಾನು ಮತ್ತು 1 ನೇ ಪ್ರತಿವಾದಿಯು ದಾವಾ ಐಟಂ. ನಂ.4 ರ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಪಿಗ್ಮಿ ಏಜೆಂಟಾರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ನನ್ನ ಪ್ರತಿವಾದಿದ ಪತ್ರದಲ್ಲಿ ತಿತಿಳಿಸಿದ್ದು ಅದಕ್ಕ ಸಂಬಂಧದಂತೆ ದಾಖಾಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. 1 ನೇ ಪರತಿವಾದಿಯೂ ಯಾವುದೇ ಪಿಗ್ಮಿ ಏಜೆಂಟಾರಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಆದ್ದರಿಂದ ನಾನು ಯಾವುದೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ನಾನು ಪತ್ರಿಕಾ ಏಜೆಂಟರಾಗಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ನನ್ನ ಪ್ರತಿವಾದಿ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಪತ್ರಿಕಾ ಏಜೆಂಟರಾಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಆದ್ದರಿಂದಲೇ ನನ್ನ ಪ್ರತಿವಾದ ಪತ್ರದಲ್ಲಿ ನಾನು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ KSFC Bank ನಿಂದ ಸಾಲವನ್ನು ಪಡೆದಿರುತ್ತೇನೆ ಎಂದು ತಿಳಿಸಿದ್ದು ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಶ್ರೀ ರಂಗನಾಥ ಜವಳಿ ಅಂಗಡಿಯನ್ನು ನನ್ನ ತಂದೆಯವರು ನಡೆಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯೂ ಮರಣ ಹೊಂದಿದ ನಂತರ ಸದರಿ ಶ್ರೀ ರಂಗನಾಥ ಜವಳಿ ಅಂಗಡಿಯ ಹೆಸರಿನಲ್ಲಿ 1 ನೇ ಪ್ರತಿವಾದಿಯೂ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆಂದರ ಸರಿಯಲ್ಲ. ಸಾಕ್ಷಿಯೂ ಮುಂದುವರದು ನನ್ನ ಅಣ್ಣನಾದ 1 ನೇ ಪ್ರತಿವಾದಿಯು ಆ ಹೆಸರನ್ನು ಇಟ್ಟುಕೂಂಡು ಅಂಗಡಿಯನ್ನು ನಡೆಸಿರುತ್ತಾರೆಂದು ನುಡಿಯುತ್ತಾರೆ. ಶ್ರೀ ರಂಗನಾಥ ದೇವರು ನಮ್ಮ ಕುಟುಂಬದ ಮನೆಯ ದೇವರು ಆಗಿರುತ್ತದೆ ಎಂದೆರ ಸರಿ

ನಮ್ಮ ಕುಟುಂಬದಲ್ಲಿ ಏನೇ ವ್ಯವಹಾರ ಮಾಡುವುದಾದರೂ ಶ್ರೀ ರಂಗನಾಥ ದೇವರ ಹೆಸರಿನಲ್ಲಿಯೇ ಮಾಡುತ್ತೇವೆ ಎಂದರೆ ಸರಿ. ನಾನು ಈಗ ಪ್ರಜಾ ಪ್ರಗತಿ ದಿನಪತ್ರಿಕೆಯ ವರದಿಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅದರ ಜೊತೆಗೆ LIC ಏಜೆಂಟರಾಗಿ ಮತ್ತು ಟೈಲರಿಂಗ್ ಮೆಟರಿಯಲ್ಸ್ ಗಳನ್ನು ಮಾರಾಟ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ಟೈಲರಿಂಗ್ ಮಾಡುತ್ತಿಲ್ಲ ಎಂದರೆ ಸಾಕ್ಷಿಯು ಈಗ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರಜಾ ಪ್ರಗತಿ ದಿನಪತ್ರಿಕೆಯ ವರದಿಗಾರನಾಗಿರುತ್ತೇನ ೆಂ ದು ವಾದಿಗೆ ಇಲ್ಲ ಸಲ್ಲದ ಕಿರುಕುಳವನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ವಾದಿಗೆ ನಾನು ದಾವಾ ಆಸಿತಯಲ್ಲಿ ಭಾಗ ಕೇಳಿದರೆ ನಿನ್ನ ಪೋಟೋವನ್ನು ಪೇಪರಿಗೆ ಹಾಕಿಸುತೇನೆಂದು ಹೆದರಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ಮತ್ತು 2 ಸಹ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ ಎಂದೆರ ಸರಿಯಲ್ಲ. ನಮ್ಮ ಒಟ್ಟು ಕುಟುಂಬದ ಆದಾಯದಿಂದ ದಿಃ 03 .03.1998 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ದಾವಾ ಐಟಂ ನಂ. 1 ಮತ್ತು 2 ಖರೀದಿಸಿರಲಾಗುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ. ನಂ. 6 ಅನ್ನು ನಮ್ಮ ಒಟ್ಟು ಕುಟುಂಬದ ಆದಾಯದಿಂದ ದಿಃ 10.08.1992 ರಂದು ಖರೀದಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟಂಬದ ಆದಾಯದಿಂದ ದಾವಾ ಐಟಂ ನಂ.1,2, 4 ಮತ್ತು 6 ಗಳನ್ನು ಖರೀದಿಸಿರಲಾಗುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ. ನಂ. 3 ಮತ್ತು 5 ನನ್ನ ತಾತನವರಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಗಳಲ್ಲಿ ನಮಗೆ ಯಾವುದು ಪಿತಾರ್ಜಿತವಾಗಿ ಬಂದಿರುವುದಿಲ್ಲ ವಾದಿಗೆ ನೀಡಿರುವ ಆಸ್ತಿಯುೂ ಪಿತ್ರರ್ಜಿತವಾದ ಆಸ್ತಿಯಾಗಿದ್ದು ಅದನ್ನು ಈ ದಾವೆಯಲ್ಲಿ ಸೇ ರಿಸಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಯಾವುದೇ ಆಸ್ತಿಯನ್ನು ನೀಡಿರುವುದಿಲ್ಲ, ಸದರಿ ಆಸ್ತಿಯೂ ಇಲ್ಲದಿರುವುದರಿಂದಲೇ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರು ಶೋಭಾ, ನನ್ನ ಅಣನಾದ 1ನೇ ಪ್ರತಿವಾದಿಯ ಹೆಂಡತಿಯ ಹೆಸರು ಲಕ್ಷ್ಮಿಬಾಯಿ ಆಗಿರುತ್ತದೆ . ನನ್ನ ಹೆಂಡತಿ ಮತ್ತು ನನ್ನ ಅಣ್ಣನ ಹೆಂಡತಿ ಬಡ ಕುಟುಂಬದಿಂದ ಬಂದವರಾಗಿರುತ್ತಾರೆಂದರೆ ಸರಿಯಲ್ಲ. ಬಡತನ ಇರುವುದರಿಂದಲೇ ನನ್ನ ಅಣ್ಣನ ಹೆಂಡತಿಯ ಅಕ್ಕನ ಮಗನನ್ನು ತಂದು 1ನೇ ಪ್ರತಿವಾದಿಯೇ ಸಾಕಿ ವಿವಾಹ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಆತನಿಗ ತಂದೆ ತಾಯಿ ಇರಲಿಲ್ಲ ಆದ್ದರಿಂದ 1ನೇ ಪ್ರತಿವಾದಿ ತಂದು ಸಾಕಿ ವಿವಾಹ ಮಾಡಿರುತ್ತಾರೆ

ಎಂದು ನುಡಿಯುತ್ತಾರೆ. ನನ್ನ ಅಣ್ಣನ ಹೆಂಡತಿ ಮತ್ತು ನನ್ನ ಹೆಂಡತಿಯ ತವರು ಮನೆಯವರು ಕಡು ಬಡವರಾಗಿದ್ದು, ನನಗೂ ಮತ್ತು ನನ್ನ ಅಣ್ಣನಾದ 1ನೆ ೇ ಪ್ರತಿವಾದಿಗೆ ವರದಕ್ಷಿಣೆ ಮತ್ತು ಯಾವುದೇ ಬಳುವಳಿಗಳನ್ನೂ ಕೊಡಲು ಶಕ್ತರಾಗಿರಲಿಲ್ಲ ಎಂದರೆ ಸರಿ. ನನ್ನ ಮತ್ತು 1ನೇ ಪ್ರತಿವಾದಿಯ ಹೆಂಡತಿಯ ತವರು ಮನೆಯವರು ದೈನಂದಿನ ವ್ಯವಹಾರಗಳನ್ನು ನಡೆಸಲು ಶಕ್ತರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 1ನೇ ಪ್ರತಿವಾದಿಯಿ ಹೆಂಡತಿಯ ತವರು ಮನೆಯವರು ಬಡವರಾಗಿರದ್ದರು ಸಹ ನನ್ನ ಮತ್ತು 1ನೇ ಪ್ರತಿವಾದಿಯ ಹೆಂಡತಿಯರ ಹೆಸರಿನಲ್ಲಿ ಜಂಟಿಯಾಗಿ ದಾವಾ ಐಟಂ. ನಂ.1 ಕ್ಕೆ ಸಂಬಂಧಿಸಿದಂತೆ ಸುಳ್ಳು ಕ್ರಯ ಪತ್ರವನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಐಟ್ಮ ನಂ. 1 ಅನ್ನು ಒಟ್ಟು ಕುಟುಂಬದ ಆಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟ್ಮ ನಂ. 1ಅನ್ನು ಖರೀದಿಸುವುದಕ್ಕೆ ಹಣವನ್ನು ನನ್ನ ಮತ್ತು 1ನೇ ಪ್ರತಿವಾದಿಯವರ ಹೆಂಡತಿಯವರ ತವರು ಮನೆಯವರು ಹರಿಶಿಣ ಕುಂಕುಮಕ್ಕೆ ನೀಡಿರುತ್ತಾರೆ ಎಂದು ನಮ್ಮ ಲಿಖಿತ ಹೇಳಿಕೆಯಲ್ಲಿ ಸುಳ್ಳು ಬರೆಸಿರುತ್ತಾರೆಂದರೆ ಸರಿಯಲ್ಲ. ನನ್ನ ಹೆಂಡತಿ ಸೋದರ ಮಾವನ ಮಗಳು ಎಂದರೆ ಸರಿ. ನನ್ನ ಹೆಂಡತಿ ತವರು ಮನೆಯವರು ಬಡವರು ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು ಸಮಯ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**